<u>ದಿನಾಂಕಃ**12-12-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ **2** ನೇ ಎದುರುದಾರರ ಪರ ಶ್ರೀ ಎಸ್.ಆರ್.ಎಸ್.ವಕೀಲರಿಂದಃ</u>

ನಾನು 10 ವರ್ಷಗಳಿಂದ ಅಡುಗೆ ಕಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಕೆಲವೊಂದು ಅಡುಗೆ ಕಂಟ್ರಾಕ್ಟರ್ ಅನ್ನು ಸ್ವತಂತ್ರವಾಗಿ ಮಾಡುತ್ತಿದ್ದು. ನಾನು ಅಡುಗೆ ಕಂಟ್ರಾಕ್ಟರ್ ಮಾಡುವ ಸಂಬಂಧ ಕಛೇರಿ ತೆರೆದಿರುವುದಿಲ್ಲ ಆದರೆ ಮನೆಯಲ್ಲಿಯೇ ಮಾಡುತ್ತೇನೆ. ಅಡುಗೆ ಕಂಟ್ರಾಕ್ಟರ್ ಕೆಲಸವು ಸೀಸನ್ ಇದ್ದಾಗ ಇರುತ್ತದೆ ಎಂದರೆ ಸರಿ. ಆ ಕಾರಣದಿಂದ ನನಗೆ ವಾರ್ಷಿಕ ಇಷ್ಟೆ ಆದಾಯ ಬರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ಹೆಸರಿನಲ್ಲಿ ಬೇರೆ ಯಾವುದೇ ಕೃಷಿ ಜಮೀನು ಹಾಗೂ ಬೇರೆ ಉದ್ಯೋಗ ಇರುವುದಿಲ್ಲ.

2. ನಾನು ಬಿ ಪಿ ಎಲ್ ಪಡಿತರ ಚೀಟಿ ಹೊಂದಿರುತ್ತೇನೆ. ಬಿ ಪಿ ಎಲ್ ಪಡಿತರ ಚೀಟಿಯನ್ನು ವಾರ್ಷಿಕ ವರಮಾನ ರೂ.50,000/- ಸಾವಿರಕ್ಕಿಂತ ಕಡಿಮೆ ಇರುವ ಕುಟುಂಬಕ್ಕೆ ನೀಡುತ್ತಾರೆ ಎಂದರೆ ಸರಿ. ನಾನು ಅಡುಗೆ ಕೆಲಸವನ್ನು ಯಾರು ಮಾಡುವಂತೆ ಹೇಳುತ್ತಾರೋ ಅಲ್ಲಿಗೆ ಹೋಗಿ ಮಾಡುತ್ತೇವೆ. ನನಗೆ ಅಪಘಾತ ಆದ ನಂತರ ನಾನು ಅಡುಗೆ ಕಂಟ್ರಾಕ್ಟರ್ ಮಾಡುತ್ತಾ ಇಲ್ಲ. ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ ಇರುತ್ತೇವೆ. ನಾನು ಅಪಘಾತ ಆದ ದಿವಸ ಹುಲುಮಕ್ಕಿಯಿಂದ ನಮ್ಮ ಮನೆ ಇಂದಿರಾ ನಗರ ಕೊಪ್ಪಕ್ಕೆ ಬರುತ್ತಿದ್ದೆನು. ನಾನು ಆ ದಿನ ಬೈಕನ್ನು ರಸ್ತೆಯ ಮಧ್ಯ ಭಾಗದಲ್ಲಿ ಶ್ರೀಕರ ಚಲಾಯಿಸಿಕೊಂಡು ಹೋಗುತ್ತಿದ್ದನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಬೈಕ್ ರಸ್ತೆಯ ಪಕ್ಕದಲ್ಲಿ ನಿಲ್ಲಿಸಿಕೊಂಡಿದ್ದ ಎಂದು ಉತ್ತರಿಸುತ್ತಾರೆ. ದೂರುನ್ನು ಶ್ರೀಕರ ಇವರ ಹೆಂಡತಿ ಕೊಟ್ಟಿದ್ದು ಅದರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

3. ಆ ದಿನ 1 ನೇ ಎದುರುದಾರರು ಕಾರನ್ನು ನಿಧಾನವಾಗಿ ಚಲಾಯಿಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಅಪರಾಧ ವಿವರ ನಮೂನೆಯ ಜೊತೆ ಸ್ಕೆಚ್ ನಲ್ಲಿ ನಾನು ರಸ್ತೆಯ ಮಧ್ಯಭಾಗದಲ್ಲಿ ಬೈಕನ್ನು ನಿಲ್ಲಿಸಿಕೊಂಡಿದ್ದೆ ಎಂದರೆ ಸಾಕ್ಷಿ ನನಗೆ ಸ್ಕೆಚ್ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಭಾಗ್ಯಲಕ್ಷ್ಮಿ ಸರ್ವೀಸ್ ಸ್ಟೇಷನ್ ರಸ್ತೆ ತಿರುವಿನಿಂದ ಕೂಡಿರುತ್ತದೆ ಎಂದರೆ ಸಾಕ್ಷಿ ಸ್ವಲ್ಪ ತಿರುವಿನಿಂದ ಕೂಡಿರುತ್ತದೆ ಎಂದು ಉತ್ತರಿಸುತ್ತಾರೆ. ಟಾರ್ ರಸ್ತೆಯ ಪಕ್ಕದಲ್ಲಿ ಮಣ್ಣಿನ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ಮಣ್ಣಿನ ರಸ್ತೆ ನಾಲ್ಕರಿಂದ ಐದು ಅಡಿ ಅಗಲ ಇರುತ್ತದೆ. ನಾನು ಆ ದಿನ ಬೈಕನ್ನು ಮಣ್ಣಿನ ರಸ್ತೆಯಲ್ಲಿ ನಿಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ಸ್ಕೆಚ್ ಪ್ರಕಾರ ಅಪಘಾತ ಟಾರ್ ರಸ್ತೆಯ ಮೇಲೆ ಆಗಿರುತ್ತದೆ ಎಂದರೆ ಸರಿಯಲ್ಲ.

4. ಆ ದಿನ 1 ನೇ ಎದುರುದಾರರು ಸಾಕಷ್ಟು ಬಾರಿ ಹಾರ್ನ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವು 1 ನೇ ಎದುರುದಾರರ ತಪ್ಪಿ ನಿಂದ ಆಗಿರುವುದಿಲ್ಲ ಶ್ರೀಕರನ ತಪ್ಪಿ ನಿಂದ ಬೈಕ್ ನಿಂದ ಬಿದ್ದು ಅಪಘಾತ ಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಾನು ಶ್ರೀಕರನ ತಪ್ಪಿನಿಂದ ಅಪಘಾತ ಪಡಿಸಿಕೊಂಡು 1 ನೇ ಎದುರುದಾರರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಶ್ರೀಕರ ಈಗಲೂ ಸಹ ಅಡುಗೆ ಕಂಟ್ರಾಕ್ಟ್ ಕೆಲಸವನ್ನು ಮೊದಲಿನ ರೀತಿ ಮಾಡುತ್ತಾ ಇರುತ್ತಾನೆ ಎಂದರೆ ಸರಿಯಲ್ಲ.

5. ನಾನು ಅಡುಗೆ ಕಂಟ್ರಾಕ್ಟ್ ಕೆಲಸವನ್ನು ಮಾಡಿದ ನಂತರ ಹಣವನ್ನು ಹೆಚ್ಚಾಗಿ ನಗದಾಗಿ ಪಡೆದುಕೊಳ್ಳುತ್ತೇನೆ. ನಾನು ಕರ್ನಾಟಕ ಬ್ಯಾಂಕ್ ಕೊಪ್ಪದಲ್ಲಿ ಖಾತೆಯನ್ನು ಹೊಂದಿರುತ್ತೇನೆ. ನಾನು ಈಗ ಪ್ರಸ್ತುತ ಕೆಲಸ ಮಾಡುತ್ತಿದ್ದು ಅದಕ್ಕೆ ಸಂಬಂಧ ಪಟ್ಟಂತೆ ಗ್ರಾಹಕರು ನನ್ನ ಖಾತೆಗೆ ಹಣ ಪಾವತಿ ಮಾಡಿದ ಬಗ್ಗೆ ನನ್ನ ಅಕೌಂಟ್ extract ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ ಸಾಕ್ಷಿ ನಾನು ಕೆಲಸ ಮಾಡುತ್ತಿಲ್ಲ ಆದರೆ ಅಕೌಂಟ್ extract ಹಾಜರುಪಡಿಸುತ್ತೇನೆ. ನಾನು ಎನ್ ಆರ್ ಪುರ ಸರ್ಕಾರಿ ಆಸ್ಪತ್ರೆ ಹಾಗೂ ಕೆ ಎಂ ಸಿ ಆಸ್ಪತ್ರೆ ಮಣಿಪಾಲ್ ನಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

6. ನಾನು ವೈದ್ಯಕೀಯ ಬಿಲ್ಲುಗಳನ್ನು ಈ ಅರ್ಜಿಗೋಸ್ಕರ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ಬಿಲ್ಲು ಜೊತೆ ಔಷಧಿ ಚೀಟಿಗಳು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು 5 ದಿನಗಳ ಕಾಲ ಒಳರೋಗಿಯಾಗಿ ಕೆ ಎಂ ಸಿ ಆಸ್ಪತ್ರೆ ಮಣಿಪಾಲ್ ನಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ದಿನಗಳ ಕಾಲ ಒಳರೋಗಿಯಾಗಿ ಕೆ ಎಂ ಸಿ ಆಸ್ಪತ್ರೆ ಮಣಿಪಾಲ್ ನಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಶ್ರೀಕರನಿಗೆ ದ್ವಿಚಕ್ರ ವಾಹನ ಚಲಾಯಿಸಲು ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರ ತಪ್ಪಿ ನಿಂದ ಆಪಘಾತ ಆಗದೇ ಇರುವ ಕಾರಣ 2 ನೇ ಎದುರುದಾರರ ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ.

7. ನಾನು ಯಾವ ಯಾವ ದಿನಾಂಕದಂದು ಮಣಿಪಾಲ್ ಗೆ ಚಿಕಿತ್ಸೆಗಾಗಿ ಹೋಗಿರುತ್ತೇನೆ ಎಂದು ಈಗ ದಿನಾಂಕ ಹೇಳಲು ನನಗೆ ನೆನಪಿರುವುದಿಲ್ಲ. ದಿನಾಂಕ 28.08.2024 ರಿಂದ ದಿನಾಂಕ 01.09.2024 ರವರೆಗೆ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಆಸ್ಪತ್ರೆಯಿಂದ ಬಿಡುಗಡೆಯಾದ ಒಂದು ವಾರದ ನಂತರ ಪುನಃ ಚಿಕಿತ್ಸೆಗೆ ಹೋಗಿರುತ್ತೇನೆ. ನಾನು ಚಿಕಿತ್ಸೆಗೆ ಬಾಡಿಗೆ ವಾಹನದಲ್ಲಿ ಹೋಗಿರುತ್ತೇನೆ. ಸದರಿ ಬಾಡಿಗೆ ಬಸರಿಕಟ್ಟೆ ಗ್ರಾಮದ ಮಾಲೀಕರಿಗೆ ಸೇರಿದ್ದು ಇರುತ್ತದೆ. ನಾನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಟ್ರಾವೆಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ

ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಶ್ರೀಕರ ಒಟ್ಟಾಗಿಯೇ ಆಸ್ಪತ್ರೆಗೆ ಒಂದೇ ವಾಹನದಲ್ಲಿ ಹೋಗುತ್ತಿದ್ದವು ಎಂದರೆ ಸರಿಯಲ್ಲ. ನನಗೆ ಮುಂದುವರೆದ ಚಿಕಿತ್ಸೆ ಹಣದ ಅವಶ್ಯಕತೆ ಇರದೇ ಇದ್ದರು ಹಣ ಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನನಗೆ ಅಪಘಾತ ಆಗುವ ಕಾಲಕ್ಕೆ 45 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿದ್ದರು ಸಹ ನಾನು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ವಾರ್ಷಿಕ 4 ವರೆ ಲಕ್ಷದಿಂದ ರೂ 4,80,000/- ಆದಾಯ ಇತ್ತು ಎಂದು ಸುಳ್ಳು ಘೋಷಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾಲ ಪಡೆಯುವ ಸಲುವಾಗಿ ಆ ರೀತಿ ಘೋಷಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು 2 ನೇ ಎದುರುದಾರರಿಂದ ಯಾವುದೇ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 1 ಮತ್ತು 3 ನೇ ಎದುರುದಾರರ ಪರ ವಕೀಲರು 2 ನೇ ಎದುರುದಾರರ ಪರ ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ